ಒ ಎಸ್ ನಂ.**2191/2019**
**ಪಿ.ಡಬ್ಲ್ಯೂ:1**

**ದಿನಾಂಕ:19.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:ಶ್ರೀ. ವಿ. ಜಯಕರ್, ಪ್ರತಿವಾದಿಯರ ಪರ ವಕೀಲರಿಂದ:-**

ನಿಪಿ.1 ಸಾಲದ ಕರಾರು ಪತ್ರವನ್ನು ರೂ.20/- ಸ್ಟ್ಯಾಂಪ್ ಪೇಪರ್ ಮೇಲೆ ನಾನೇ ಸೃಷ್ಟಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿ 1 ನೇ ಪ್ರತಿವಾದಿಯ ಗಂಡ ಮತ್ತು ಪ್ರತಿವಾದಿ ನಂ.2 ಮತ್ತು 3 ರವರ ತಂದೆ ಆಗಿರುವ ಬಾಲಣ್ಣನಿಗೆ ಹಣ ಕೊಟ್ಟಿದ್ದೇವೆ. ಪ್ರತಿವಾದಿ ನಂ.1 ರಿಂದ 3 ರವರಿಗೆ ನಾವು ಹಣ ಕೊಟ್ಟಿಲ್ಲ, ಆದರೆ ಹಣ ಕೊಟ್ಟ ವಿಷಯ ಅವರಿಗೆ ಗೊತ್ತಿದೆ. ಪ್ರತಿವಾದಿ ನಂ.1 ರಿಂದ 3 ರವರು ನಿಪಿ.1 ದಾಖಲೆಗೆ ಸಹಿ ಮಾಡಿಲ್ಲ ಎನ್ನುವುದು ನಿಜ. ನಾನು ಬಾಲಣ್ಣನಿಗೆ ಹಣ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಪ್ರತಿವಾದಿ ನಂ.1 ರಿಂದ 3 ರವರಿಗೆ ಬಾಲಣ್ಣ ಹಣ ಪಡೆದಿರುವ ವಿಷಯ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿ ನಂ.1 ರಿಂದ 3 ರವರೇ ಅದರ ಪೈಕಿ ಭಾಗಶಃ ಹಣ ನನಗೆ ವಾಪಸ್ಸು ಮಾಡಿದ್ದಾರೆ ಎನ್ನುತ್ತಾರೆ. ಅವರು ಭಾಗಶಃ ಹಣ ನನಗೆ ವಾಪಸ್ಸು ಕೊಟ್ಟ ಬಗ್ಗೆ ದಾಖಲೆಯನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ಪ್ರತಿವಾದಿ ನಂ.1 ರಿಂದ 3 ರವರ ಮೇಲೆ ನಾನು ಸುಳ್ಳು ಕೇಸು ಹಾಕಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**